# ಐಸಿಎಫ್‌ಎಐ ಬಿಜಿನೆಸ್ ಸ್ಕೂಲ್ (IBS), ಬೆಂಗಳೂರು





## ಐಸಿಎಫ್‌ಎಐ ಬಿಜಿನೆಸ್ ಸ್ಕೂಲ್‌ನ ನಿರ್ದೇಶಕರು ಮತ್ತು ಕ್ಯಾಂಪಸ್ ಮುಖ್ಯಸ್ಥರೊಂದಿಗಿನ ಮಾತುಕತೆ

**ಸಂದರ್ಶಕ: ಸುಧಾ ಓದುಗರ ಪರವಾಗಿ ಪ್ರೊ. ಮುರಳೀಧರ ರವರಿಗೆ ನಮಸ್ಕಾರ.**

**ಜಿವಿಎಂ:** ಧನ್ಯವಾದಗಳು. ನಿಮಗೂ ನಮಸ್ಕಾರ ಮತ್ತು ಸುಧಾ ಪತ್ರಿಕೆಯ ಹೆಮ್ಮೆಯ ಓದುಗರಿಗೆ ಕೂಡ ನಮಸ್ಕಾರ.

**ಸಂದರ್ಶಕ: ನಮಗೆ ತಿಳಿದಿರುವಂತೆ, ಐಸಿಎಫ್‌ಎಐ ಬಿಜಿನೆಸ್ ಸ್ಕೂಲ್ ಬೆಂಗಳೂರು ಈಗ ಐಎಫ್‌ಹೆಚ್‌ಇ, ಹೈದರಾಬಾದ್ ಸಂಸ್ಥೆಯ ಆಫ್–ಕ್ಯಾಂಪಸ್ ಕೇಂದ್ರವಾಗಿದೆ. ಈ ಕುರಿತಂತೆ ಒಂದಿಷ್ಟು ವಿವರವಾಗಿ ತಿಳಿಸಿಕೊಡುವಿರಾ?**

**ಜಿವಿಎಂ:** ಹೌದು. ನೀವು ಸರಿಯಾಗಿ ಹೇಳಿದ್ದೀರಿ. ಐಸಿಎಫ್‌ಎಐ ಬಿಜನೆಸ್ ಸ್ಕೂಲ್ ಬೆಂಗಳೂರು (ಐಬಿಎಸ್–ಬಿ) ಇದೀಗ, ಹೈದರಾಬಾದ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಐಸಿಎಫ್‌ಎಐ ಫೌಂಡೇಶನ್ ಫಾರ್ ಹೈಯರ್ ಎಜುಕೇಶನ್ (ಐಎಫ್‌ಹೆಚ್‌ಇ) ಎಂಬ ಖಾಸಗಿ ವಿಶ್ವವಿದ್ಯಾಲಯದ ಆಫ್–ಕ್ಯಾಂಪಸ್ ಕೇಂದ್ರವಾಗಿದೆ. ಮುಂದಿನ ವರ್ಷದಿಂದ ನಾವು, ನಮ್ಮ ಬೆಂಗಳೂರು ಕ್ಯಾಂಪಸ್‌ನಲ್ಲಿಯೇ ಎರಡು ವರ್ಷಗಳ ಐಎಫ್‌ಹೆಚ್‌ಇ ಎಂಬಿಎ ಕೋರ್ಸ್ ಪ್ರಾರಂಭಿಸುತ್ತಿದೇವೆ. ಐಎಫ್‌ಹೆಚ್‌ಇ ನ್ಯಾಕ್ (NAAC) ಮಾನ್ಯತೆ ಪಡೆಯುವ ಜೊತೆಗೆ ಎ+ ಗ್ರೇಡ್ ಕೂಡ ಪಡೆದಿದೆ ಮತ್ತು 4 ರಲ್ಲಿ 3.43 ಸ್ಕೋರ್ ಹೊಂದಿದೆ. ಭಾರತದಾದ್ಯಂತ ಇರುವ ಮ್ಯಾನೇಜ್‌ಮೆಂಟ್ ಸಂಸ್ಥೆಗಳಿಗೆ ಶಿಕ್ಷಣ ಸಚಿವಾಲಯದಿಂದ ನೀಡಲಾಗುವ ಶ್ರೇಣಿಯಲ್ಲಿ ಐಎಫ್‌ಹೆಚ್‌ಇ ಹೈದರಾಬಾದ್ ಸಂಸ್ಥೆಗೆ ಎನ್‌ಐಆರ್‌ಎಫ್ (NIRF) ರ‍್ಯಾಂಕ್ 27 ಶ್ರೇಯಾಂಕ ಲಭಿಸಿದೆ. ಐಬಿಎಸ್–ಬಿ ಸಂಸ್ಥೆಯ ನೇರ ಪೋಷಕ ಸಂಸ್ಥೆಯಾದ ಐಸಿಎಫ್‌ಎಐ ಬಿಜನೆಸ್ ಸ್ಕೂಲ್ ಹೈದರಾಬಾದ್‌ಗೆ, ಎಎಸಿಎಸ್‌ಬಿ(AACSB) ಮತ್ತು ಎಸ್‌ಎಕ್ಯೂಎಸ್ (SAQS) ಎಂಬ, ಶೈಕ್ಷಣಿಕ ಸಂಸ್ಥೆಗಳನ್ನು ಗುರುತಿಸುವ ಪ್ರತಿಷ್ಠಿತ ಅಂತರ್‌ರಾಷ್ಟ್ರೀಯ ಸಂಸ್ಥೆಗಳ ಮಾನ್ಯತೆ ಕೂಡ ಲಭಿಸಿದೆ.

**ಸಂದರ್ಶಕ: ಓಹ್ ಕುತೂಹಲಕರವಾಗಿದೆ. ಐಬಿಎಸ್ ಬೆಂಗಳೂರು ಬಗ್ಗೆ ಏನು ಹೇಳುತ್ತೀರಿ?**

**ಜಿವಿಎಂ:** ಐಬಿಎಸ್ ಬೆಂಗಳೂರು 1995 ರಲ್ಲಿಯೇ ಸ್ಥಾಪನೆಗೊಂಡಿದೆ ಮತ್ತು ಇಲ್ಲಿನ ಸುಮಾರು 25 ಬ್ಯಾಚ್‌ಗಳಾದ್ಯಂತ 5000ಕ್ಕೂ ಅಧಿಕ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಐಎಫ್‌ಹೆಚ್‌ಇ ಸಂಸ್ಥೆಯ ಆಫ್–ಕ್ಯಾಂಪಸ್ ಕೇಂದ್ರವಾಗಿರುವುದು ಮಾತ್ರ ಇತ್ತೀಚೆಗಿನ ಬೆಳವಣಿಗೆಯಾಗಿದೆ. ಜಿಹೆಚ್‌ಆರ್‌ಡಿಸಿ–ಸಿಎಸ್‌ಆರ್ (GHRDC-CSR) ಬಿ ಸ್ಕೂಲ್ ಸರ್ವೆ 2021ರ ಪ್ರಕಾರ, ಭಾರತದ ಅತ್ಯುತ್ತಮ ಸಾಧನೆಗೈದಿರುವ ಟಾಪ್ ಪ್ರತಿಷ್ಠಿತ ಬಿ–ಸ್ಕೂಲ್‌ಗಳಲ್ಲಿ ಐಬಿಎಸ್ ಬೆಂಗಳೂರು 4ನೇ ಸ್ಥಾನ ಗಳಿಸಿದೆ.

**ಸಂದರ್ಶಕ: ಐಬಿಎಸ್ ಬೆಂಗಳೂರು ಕ್ಯಾಂಪಸ್‌ನಲ್ಲಿ ಯಾವ ಯಾವ ಸೌಲಭ್ಯಗಳಿವೆ?**

ಜಿವಿಎಂ: ಕೆಂಗೇರಿಯ 23 ಎಕರೆ ವಿಶಾಲ ಪ್ರದೇಶದಲ್ಲಿ ನಮ್ಮ ಕ್ಯಾಂಪಸ್ ಸ್ಥಿತಗೊಂಡಿದ್ದು, ಇದರಲ್ಲಿ ಶೈಕ್ಷಣಿಕ ಮತ್ತು ಸಹ–ಶೈಕ್ಷಣಿಕ/ಪಠ್ಯೇತರ ಚಟುವಟಿಕೆಗಳಿಗೆ ಪೂರಕವಾದ ಅತ್ಯುತ್ತಮ ಸೌಲಭ್ಯಗಳಿವೆ. ವೈಫೈ ಮತ್ತು ಸ್ಮಾರ್ಟ್ ಬೋರ್ಡ್‌ಗಳನ್ನು ಹೊಂದಿರುವ ಅತ್ಯಾಧುನಿಕ ಕ್ಲಾಸ್‌ರೂಮ್‌ಗಳಿವೆ. ವಿಶಾಲವಾದ ಆಟದ ಮೈದಾನಗಳು ಮತ್ತು ಇನ್ನಿತರ ಪಠ್ಯೇತರ ಚಟುವಟಿಕೆಗಳಿಗಾಗಿ ಮೂಲಸೌಕರ್ಯಗಳು ಕೂಡ ಲಭ್ಯವಿವೆ. ಕ್ಯಾಂಪಸ್‌ನಲ್ಲಿ ವಿವಿಧ ಉಪಹಾರ ಕೇಂದ್ರಗಳಿವೆ ಮತ್ತು ಕ್ಯಾಂಪಸ್‌ನ ಸಮೀಪದಲ್ಲಿಯೇ ಖಾಸಗಿ ಸೇವಾ ಪೂರೈಕೆದಾರರಿಂದ ನಿರ್ವಹಿಸಲ್ಪಡುವ ಹಲವಾರು ಹಾಸ್ಟೇಲ್‌ಗಳು ಕೂಡ ಲಭ್ಯವಿವೆ.



**ಪ್ರೊ ಜಿ. ವಿ. ಮುರಳೀಧರ**
ನಿರ್ದೇಶಕರು ಮತ್ತು ಕ್ಯಾಂಪಸ್ ಮುಖ್ಯಸ್ಥರು,
ಐಸಿಎಫ್‌ಎಐ ಬಿಜನೆಸ್ ಸ್ಕೂಲ್ ಬೆಂಗಳೂರು

**ಸಂದರ್ಶಕ: ಐಬಿಎಸ್ ಬೆಂಗಳೂರು ಇಲ್ಲಿ ಪ್ರವೇಶ ಪಡೆಯುವುದು ಹೇಗೆ?**

**ಜಿವಿಎಂ:** ಯಾವುದೇ ವಿಭಾಗದಲ್ಲಿ ಪದವಿ ಪೂರ್ಣಗೊಳಿಸಿದವರು ಅಥವಾ ಪದವಿ ಅಂತಿಮ ವರ್ಷದಲ್ಲಿ ಓದುತ್ತಿರುವ ಯಾರಾದರೂ, ಡಿಸೆಂಬರ್ 25 ಮತ್ತು 26 ರಂದು ನಡೆಸಲಾಗುವ ಐಬಿಎಸ್‌ಎಟಿ (IBSAT) ಎಂಬ ಪ್ರವೇಶ ಪರೀಕ್ಷೆಯ ಮುಖಾಂತರ ಪ್ರವೇಶಾತಿ ಪಡೆದುಕೊಳ್ಳಬಹುದು. ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಗೊಂಡವರನ್ನು ಗುಂಪು ಚರ್ಚೆಗೆ ಕರೆಯಲಾಗುತ್ತದೆ ಮತ್ತು ವೈಯಕ್ತಿಕ ಸಂದರ್ಶನದ ಆಧಾರದ ಮೇರೆಗೆ ಅಂತಿಮ ಆಯ್ಕೆಗಳನ್ನು ನಿರ್ಧರಿಸಲಾಗುತ್ತದೆ. ಸಂಪೂರ್ಣ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ನಮ್ಮಲ್ಲಿ ದೇಶದ ವಿಭಿನ್ನ ಮೂಲೆಗಳಿಂದ ಆಗಮಿಸಿದ ವೈವಿಧ್ಯಮಯ ಹಿನ್ನಲೆಯುಳ್ಳ ವಿದ್ಯಾರ್ಥಿಗಳಿದ್ದಾರೆ.

**ಸಂದರ್ಶಕ: ಎಂಬಿಎ ಕೋರ್ಸ್ ಮುಗಿಸಿದ ಬಳಿಕ ಉದ್ಯೋಗಾವಕಾಶ ಸೌಲಭ್ಯ ಹೇಗಿದೆ?**

**ಜಿವಿಎಂ:** ಕಳೆದ 25 ವರ್ಷಗಳಿಂದ ಬಹುತೇಕ ನಮ್ಮ ಎಲ್ಲಾ ವಿದ್ಯಾರ್ಥಿಗಳಿಗೂ ಸುಲಭವಾಗಿ ಉದ್ಯೋಗಾವಕಾಶಗಳು ಲಭಿಸುತ್ತಿವೆ. ಹಿಂದಿನ ವರ್ಷ, ಶೇಕಡ 90 ರಷ್ಟು ನಮ್ಮ ಅರ್ಹ ವಿದ್ಯಾರ್ಥಿಗಳು ವಾರ್ಷಿಕ ರೂ. 5.91 ಲಕ್ಷ ವೇತನವುಳ್ಳ ಉದ್ಯೋಗಾವಕಾಶಗಳನ್ನು ಪಡೆದಿದ್ದಾರೆ. ನಮ್ಮಲ್ಲಿ ವರ್ಷದಿಂದ ವರ್ಷಕ್ಕೆ ಭಾರತದ ಅತ್ಯಂತ ಪ್ರತಿಷ್ಠಿತ ಉದ್ಯೋಗದಾತ ಸಂಸ್ಥೆಗಳು ಆಗಮಿಸುತ್ತಿವೆ.

**ಸಂದರ್ಶಕ: ಕೋವಿಡ್ ಸಾಂಕ್ರಾಮಿಕ ಸಮಸ್ಯೆಯಿಂದ ಉದ್ಯೋಗಾವಕಾಶದ ಮೇಲೆ ಪರಿಣಾಮ ಉಂಟಾಗಿದೆಯೆ?**

ಜಿವಿಎಂ: ನಮ್ಮ ಕ್ಯಾಂಪಸ್‌ನಲ್ಲಿ ಉದ್ಯೋಗಾವಕಾಶದ ಸಮಸ್ಯೆ ಎದುರಾಗಲಿಲ್ಲ. ಹಿಂದಿನಂತೆಯೆ ನಮ್ಮಲ್ಲಿ ನಿರಂತರವಾಗಿ ಅತ್ಯುತ್ತಮ ಪ್ಲೇಸ್‌ಮೆಂಟ್ ಸೇವೆಯು ಜಾರಿಯಲ್ಲಿತ್ತು.

**ಸಂದರ್ಶಕ: ಐಬಿಎಸ್ ಸಂಸ್ಥೆಯ ವಿಶೇಷತೆ ಏನು?**

**ಜಿವಿಎಂ:** ನಾವು ಕೈಗಾರಿಕೆಗಳೊಂದಿಗೆ ಅತ್ಯುತ್ತಮ ಸಂಪರ್ಕ ಹೊಂದಿದ್ದೇವೆ ಮತ್ತು ನಮ್ಮ ಸಮಕಾಲೀನ ಪಠ್ಯಕ್ರಮವು ಇತ್ತೀಚೆಗಿನ ಅಗತ್ಯಗಳಿಗೆ ಸಮರ್ಪಕವಾಗಿದೆ. ನಾವು ನಮ್ಮ ವಿದ್ಯಾರ್ಥಿಗಳು ಕೈಗಾರಿಕೆಗೆ ತಕ್ಕನಾಗಿ ಸನ್ನದ್ಧರಾಗಿರುವಂತೆ ರೂಪಿಸುವಲ್ಲಿ ಹೆಚ್ಚಿನ ಕಾಳಜಿ ವಹಿಸುತ್ತೇವೆ ಮತ್ತು ನಮ್ಮ ವಿದ್ಯಾರ್ಥಿಗಳು ತಮ್ಮ ವೃತ್ತಿಭವಿಷ್ಯದಲ್ಲಿ ದೀರ್ಘಾವಧಿ ಸಾಧನೆ ಮಾಡುವಂತೆ ತರಬೇತಿ ನೀಡುತ್ತೇವೆ. ಅಲ್ಲದೆ ನಮ್ಮ ಬೋಧನಾ ಕ್ರಮದಲ್ಲಿ ಪ್ರಕರಣಗಳು/ ನಿದರ್ಶನಗಳು ಹಾಗೂ ವೈಯುಕ್ತಿಕ ಅನುಭವಗಳಿಗೆ ಪ್ರಧಾನತೆ ಕೊಡಲಾಗುತ್ತದೆ. ವಿದ್ಯಾರ್ಥಿಗಳು ಮೃದು ಕೌಶಲ್ಯಗಳಲ್ಲಿ (Soft Skills) ತರಬೇತಿ ಪಡೆಯುತ್ತಾರೆ ಹಾಗೂ ಕಂಪನಿ ಆಧಾರಿತ ಪ್ಲೇಸ್‌ಮೆಂಟ್ ತರಬೇತಿ ಕೂಡ ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಸವಿವರವಾದ ಹಾಗೂ ದೀರ್ಘ ಅವಧಿಯ ಇಂಟರ್ನ್‌ಶಿಪ್ ಒದಗಿಸಲಾಗುತ್ತದೆ ಹಾಗೂ ಉದ್ಯಮ ಪರಿಣಿತರ ಹಲವಾರು ಅತಿಥಿ ಉಪನ್ಯಾಸಗಳನ್ನು ನೀಡಲಾಗುತ್ತದೆ.

**ಸಂದರ್ಶಕ: ಎಂಬಿಎ ಕೋರ್ಸ್ ಪೂರ್ಣಗೊಳಿಸಲು ಎಷ್ಟು ಖರ್ಚು ಆಗಬಹುದು?**

**ಜಿವಿಎಂ:** ಎರಡು ವರ್ಷಗಳ ಎಂಬಿಎ ಕೋರ್ಸ್‌ನ ಒಟ್ಟು ಬೋಧನಾ ಶುಲ್ಕ ರೂ. 12.06 ಲಕ್ಷ ಆಗಿದ್ದು, ಈ ಶುಲ್ಕವನ್ನು ಆರು ಕಂತುಗಳಲ್ಲಿ ಪಾವತಿಸ ಬಹುದಾಗಿರುತ್ತದೆ. ಇದಕ್ಕೆ ಹೆಚ್ಚುವರಿಯಾಗಿ, ವಸತಿ ಮತ್ತು ಊಟದ ಖರ್ಚು ಪ್ರತ್ಯೇಕವಾಗಿರುತ್ತದೆ. ಸಾಕಷ್ಟು ಪ್ರಮುಖ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ನಮ್ಮ ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲ ನೀಡುತ್ತಲಿವೆ. ಕೆಲವು ಸಂಸ್ಥೆಗಳೊಂದಿಗೆ ನಮ್ಮಲ್ಲಿ ನಿರ್ದಿಷ್ಟ ವ್ಯವಸ್ಥೆಗಳಿವೆ.

**ಸಂದರ್ಶಕ: ನಿಮ್ಮೆಲ್ಲ ಮಾಹಿತಿಗಾಗಿ ಧನ್ಯವಾದಗಳು ಪ್ರೊ. ಮುರಳೀಧರ. ಇದೆಲ್ಲ ಮಾಹಿತಿಯನ್ನು ನಮ್ಮ ಓದುಗರು ಸದುಪಯೋಗ ಮಾಡಿಕೊಳ್ಳುವರೆಂದು ಆಶಿಸುತ್ತೇನೆ.**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಡಾ. ಎ. ಶ್ರೀಧರಕುಮಾರ್
**9553099905**